# ಐದು ಹೂಗಳ ಅಲಂಕಾರ - 2

ಸಂಕಲನ (ಬಂಗಾಳಿ) : **ಬ್ರಹ್ಮಚಾರಿ ಅಕ್ಷಯಚೈತನ್ಯ**
ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)**

**೧೯. ನಾರಾಯಣ ರುದ್ರ**

ಜಯರಾಮಬಾಟಿಯಲ್ಲಿ ಶ್ರೀಮಾತೆಯವರ ದರ್ಶನ ಪಡೆದು ನಾನು, ಅತುಲಕೃಷ್ಣ ದಾಸ್ ಹಾಗೂ ಶಶಿಭೂಷಣ ದಾಸ್ ಮೂವರೂ ಕಾಲ್ನಡಿಗೆಯ ಮೂಲಕ ತಾರಕೇಶ್ವರಕ್ಕೆ ಬರುತ್ತಿದ್ದೆವು. ಜಹಾನಾಬಾದ್ ಹೋಟೆಲಿನಲ್ಲಿ ಮಧ್ಯಾಹ್ನ ಊಟ ಮಾಡಿ ಮತ್ತೆ ಹೊರಟೆವು. ದಾಮೋದರ ನದಿಯನ್ನು ದಾಟಿ, ಬೇನಾ ಬನದ (ಕಾಡು ಪ್ರದೇಶ) ನಡುವೆ ಬಂದುಬಿಟ್ಟೆವು. ದಾರಿ ಸಿಗುತ್ತಿಲ್ಲ ; ರಾತ್ರಿಹೊತ್ತು ಬೇರೆ. ಇದ್ದಕ್ಕಿದಂತೆ ನೋಡುತ್ತೇವೆ- ಒಂದು ಬೆಳಕು ನಮ್ಮ ಮುಂದೆಯೇ ಹೋಗುತ್ತಿದೆ! ಬೆಳಕನ್ನು ಹಿಡಿದವರು ಯಾರೋ ಇದ್ದಾರೆ ಎಂದು ನಮಗನ್ನಿಸಿದರೂ, ನಮ್ಮ ಕಡೆಯಿಂದ ಯಾರನ್ನೂ ಕಾಣಲು ಸಾಧ್ಯವಾಗಲಿಲ್ಲ. ಸುಮಾರು ಒಂದು ಮೈಲಿ ದೂರ ನಡೆದಿರಬೇಕು, ಅಷ್ಟರಲ್ಲಿ ಕಾಡು ಪ್ರದೇಶದಿಂದ ಹೊರಗೆ ಬಂದುಬಿಟ್ಟೆವು. ರಸ್ತೆ ಕಾಣಿಸುತ್ತಿದ್ದಂತೆ, ಅದು ತಾರಕೇಶ್ವರಕ್ಕೆ ಹೋಗುವ ರಸ್ತೆಯೆಂದು ಗೊತ್ತಾಯಿತು. ಆಗ ನೋಡಿದೆವು - ಆ ಬೆಳಕು ಈಗ ಕಾಣಿಸುತ್ತಿರಲಿಲ್ಲ.

**೨೦. ನಿಶಿಕಾಂತ ಮಜುಮ್‌ದಾರ್**

ದುರ್ಗಾಪೂಜೆಯ ಮಹಾಷ್ಟಮಿ ದಿನದಂದು ಬೇಲೂರು ಮಠಕ್ಕೆ ಹೋಗಿದ್ದೆ. ಉತ್ತರ ದಿಕ್ಕಿನ ಉದ್ಯಾನ ಮನೆಯಲ್ಲಿ ಯೋಗಿನ್-ಮಾ ಹಾಗೂ ಗೋಲಾಪ್-ಮಾ ಇವರ ನಡುವೆ ಶ್ರೀಮಾತೆ ಕುಳಿತಿದ್ದರು. ಸುತ್ತಮುತ್ತ ಬಹಳ ಮಂದಿ ಮಹಿಳೆಯರಿದ್ದರು. ಶ್ರೀಮಾತೆ ಹೇಳಿದರು: ''ಏನು ಮಗೂ? ದುರ್ಗಾಪೂಜೆ ನೋಡಲು ಬಂದಿದ್ದೀಯಾ? ನೋಡು, ನೋಡು- ಹೇಗೆ ನಾನು ಜಯೆ- ವಿಜಯೆಯರೊಂದಿಗೆ ಕುಳಿತಿದ್ದೇನೆ!'' *(ಜಯೆ-ವಿಜಯೆಯರು ಶ್ರೀದುರ್ಗಾಮಾತೆಯ ಸಖಿಯರು -ಅನು)*

**೨೧. ಪ್ರಫುಲ್ಲಮುಖೀ ಬಸು**

ಒಬ್ಬಾಕೆ ಐರೋಪ್ಯ ಭಕ್ತ ಮಹಿಳೆ ಮಾತನಾಡುತ್ತಿದ್ದಾಗ ಶ್ರೀಮಾತೆಯವರು ಮೃದುವಾಗಿ ನಗುತ್ತ ತಲೆಯಾಡಿಸುತ್ತಿದ್ದರು. ಆ ನಗುವನ್ನು ಯಾರಾದರೂ ಒಂದು ಬಾರಿ ನೋಡಿದ್ದರೂ ಸರಿ, ಅದನ್ನು ಜೀವನದಲ್ಲೆಂದೂ ಮರೆಯುವುದು ಸಾಧ್ಯವಿಲ್ಲ. ಆ ಮಹಿಳೆ ಹೊರಟುಹೋದ ನಂತರ ಶ್ರೀಮಾತೆಯವರು ಹೇಳಿದರು: ''ನನ್ನೊಂದಿಗೆ ಮಾತನಾಡುವುದಕ್ಕೋಸ್ಕರ ಆಕೆ 'ಬಾಲ್ಯಶಿಕ್ಷಾ ಪುಸ್ತಕ'ವನ್ನು (ಬಂಗಾಳಿ ಅಕ್ಷರಮಾಲೆ ಪಠ್ಯಪುಸ್ತಕ) ಖರೀದಿಸಿ ಬಂಗಾಳಿ ಕಲಿತಳು. ನಾನು ಬೆಳಿಗ್ಗೆ ನಾಲ್ಕು ಗಂಟೆಗೆ ಏಳುತ್ತೇನೆ ಎಂಬುದನ್ನು ಕೇಳಿ, ಅವಳೂ ನಾಲ್ಕು ಗಂಟೆಯ ಹೊತ್ತಿಗೆ ಎದ್ದು ಬಿಡುತ್ತಾಳೆ.''



ಮಾಕು (ಶ್ರೀಮಾತೆ ತಮ್ಮ ಪ್ರಸನ್ನನ ಮಗಳು), ಅವಳ ಮಗು ನ್ಯಾಡ, ಶ್ರೀಮಾತೆ

**೨೨. ಡಾ. ಪ್ರಭಾಕರ ಮುಖರ್ಜಿ**

ಶ್ರೀರಾಮಕೃಷ್ಣರಿಗೋಸ್ಕರ ಹೂವಿನ ಹಾರ ಕಟ್ಟಲು ಶ್ರೀಮಾತೆ ಹೇಳಿದ್ದರು. ಶ್ಯಾಮ (ಕೃಷ್ಣ), ಶ್ಯಾಮಾ (ಕಾಳಿ) ಅಥವಾ ಶಿವ ಈ ಭಾವಗಳಿಂದ ನೋಡುವಾಗ, ಅದಕ್ಕೆ ಸರಿಹೊಂದುವಂತೆ ಹಾರಗಳನ್ನು ಕಟ್ಟುವುದು ಹೇಗೆ ಎಂದು ಚಿಂತಿಸುತ್ತಿದ್ದೆ. ಇದ್ದಕ್ಕಿದ್ದಂತೆ ಅನ್ನಿಸಿತು, ಶ್ರೀರಾಮಕೃಷ್ಣರೇ ಎಲ್ಲವೂ ಆಗಿದ್ದಾರೆ; ಎಲ್ಲ ಬಗೆಯ ಹೂಗಳು, ತುಳಸೀಪತ್ರೆ, ಬಿಲ್ವಪತ್ರೆಗಳಿಂದ ಹಾರ ಕಟ್ಟಿದರೆ ಒಳ್ಳೆಯದಲ್ಲವೆ? ಶ್ರೀಮಾತೆಯವರು ತಮ್ಮ ಹೊಸ ಮನೆಯ

ಜಗಲಿಯಲ್ಲಿ ಏನೋ ಆಲೋಚಿಸುತ್ತ ಕುಳಿತಿದ್ದರು; ಮಧುರವಾಗಿ ಅವರು ಮಂದಹಾಸ ಬೀರಿದರು.

ಜಯರಾಮಬಾಟಿಯಲ್ಲಿ ಯಾರಾದರೂ ನೆರೆಹೊರೆಯವರಿಗೆ ಕಾಯಿಲೆಯುಂಟಾದಾಗ ಶ್ರೀಮಾತೆಯವರು ಅವರಿಗೆ ಚಿಕಿತ್ಸೆ ಮಾಡಲು ನನ್ನನ್ನು ಕಳುಹಿಸುತ್ತಿದ್ದರು. ಅದಕ್ಕೆ ಅವರ ಅನುಮತಿ ಬೇಡುವಾಗ ಹೇಳುತ್ತಿದ್ದರು: ''ಹೋಗಿ ಬಾ, ನಿನಗೆ ಯಶಸ್ಸು ಸಿಗಲಿ.'' ರೋಗಿ ನಿಸ್ಸಂದೇಹವಾಗಿಯೂ ಗುಣಮುಖನಾಗುತ್ತಿದ್ದ.

**೨೩. ವಿಭೂತಿಭೂಷಣ ಘೋಷ್**

ಶ್ರೀರಾಮಕೃಷ್ಣರ ಬಗ್ಗೆ ಮಾತನಾಡುತ್ತ ಶ್ರೀಮಾತೆ ಹೇಳಿದ್ದರು: ''ಚೈತನ್ಯ ಮಹಾಪ್ರಭು ಅವತಾರವೇ ಆಗಿದ್ದಿರಬಹುದು; ಆದರೆ ಶ್ರೀರಾಮಕೃಷ್ಣರು ಘೂಮಡಿ (ಸಾಧನೆಗೆ ಸಹಾಯಕಿಯಾದ ಸ್ತ್ರೀ)ಯನ್ನು ಹೊಂದಿಲ್ಲದಿದ್ದರೆ ಅವತಾರವೆತ್ತಬೇಕಾಗಿರಲಿಲ್ಲ.'' ಬಳಿಕ ತಮ್ಮ ಬಗ್ಗೆ ಹೀಗೆ ಹೇಳಿದರು: ''ಆಗಿನ್ನೂ ನಾನು ಶ್ರೀರಾಮಕೃಷ್ಣರನ್ನು ಠಾಕೂರ್ ಎಂದು ಕರೆಯುತ್ತಿರಲಿಲ್ಲ. ಲಕ್ಷ್ಮಿ ಮತ್ತು ನಾನು ಅವರಿಂದ ಮಂತ್ರದೀಕ್ಷೆ ಪಡೆದೆವು.''

ಕಲ್ಕತ್ತೆಯಿಂದ ಶ್ರೀಮಾತೆಯವರು ಜಯರಾಮಬಾಟಿಗೆ ಹೋಗುತ್ತಿದ್ದರು. ಪಲ್ಲಕ್ಕಿಯೊಳಗೆ ಅವರು ಕುಳಿತಿದ್ದರು; ಶ್ರೀರಾಮಕೃಷ್ಣರ ಭಾವಚಿತ್ರವಿದ್ದ ಪೆಟ್ಟಿಗೆಯೂ ಅದರೊಳಗೇ ಇತ್ತು. ನಾನು ಶ್ರೀರಾಮಕೃಷ್ಣರ ಪೆಟ್ಟಿಗೆಯನ್ನು ಪಲ್ಲಕ್ಕಿಯಿಂದ ಇಳಿಸುತ್ತಿದ್ದೆ. ಅದನ್ನು ತುಸು ಓರೆಯಾಗಿ ಮಾಡಿ ಇಳಿಸುವುದಕ್ಕೆ ಕಷ್ಟವಾಗುತ್ತಿದ್ದುದನ್ನು ಕಂಡ ಶ್ರೀಮಾತೆ ನಗುತ್ತ, ''ವಿಶ್ವಂಭರರಲ್ಲವೆ?'' ಎಂದರು. (ಇಡೀ ಜಗತ್ತನ್ನೇ ತುಂಬಿಕೊಂಡಿರುವವರು ತಾನೇ ಶ್ರೀರಾಮಕೃಷ್ಣರು – ಎಂಬ ಅರ್ಥದಲ್ಲಿ –ಅನು)

ದೊಡ್ಡ ಮಾವನ (ಪ್ರಸನ್ನಕುಮಾರ) ಮನೆಯ ಚಪ್ಪರದ ಕೆಳಗೆ ಒಂದು ದೊಡ್ಡ ಮೀನು ಬಿದ್ದಿತ್ತು. ಅದನ್ನು ನೋಡಿ ಶ್ರೀಮಾತೆ ಹೇಳಿದರು: ''ಪ್ರಸನ್ನ ಈ ಮೀನನ್ನು ಹಿಡಿದ. ನಾನು ನೋಡುವಾಗ ಅವನು ಕಲೂಪುಕುರ (ಕೊಳ)ದಿಂದ ಮೀನನ್ನು ಹಿಡಿದು, ಗಾಳದ ಮುಳ್ಳನ್ನು ಚೆನ್ನಾಗಿ ಒತ್ತಿ, ದಾರದಿಂದ ಆ ಮೀನನ್ನು ಆಟವಾಡಿಸುತ್ತಿದ್ದ. ಠಾಕೂರು ಇದೇ ರೀತಿ ಶಿಷ್ಯಂದಿರನ್ನು ಆಟವಾಡಿಸುತ್ತಿದ್ದರು.''

ಸಂಜೆಯಾಗುತ್ತಲೇ ಜಯರಾಮಬಾಟಿಯಿಂದ ಹೊರಟಿದ್ದೆ; ಆಗ ಸಣ್ಣ ಅತ್ತೆ ಹೇಳಿದರು: ''ವಿಭೂತಿ, ನೀನು ಒಬ್ಬನೇ ಹೊರಟಿದ್ದೀಯಾ?'' ಆಗ ಶ್ರೀಮಾತೆ ಹೇಳಿದರು: ''ಒಬ್ಬನೇ ಏಕೆ ಹೋಗುತ್ತಾನೆ? ಜೊತೆಯಲ್ಲಿ ಶ್ರೀರಾಮಕೃಷ್ಣರು ಕೂಡ ಹೋಗುತ್ತಾರೆ.''

ಮುಜಾಫರ್‌ಪುರದಿಂದ ನನ್ನ ಪತ್ನಿ ಅಮಿಯಾ ಬಾಲಾಳನ್ನು ಕಾಶಿಗೆ ಕರೆದುಕೊಂಡು ಹೋಗಿದ್ದೆ. ಆಗ ಶ್ರೀಮಾತೆಯವರು ಎಣ್ಣೆ ಹಚ್ಚಿ, ಸ್ನಾನ ಮಾಡಲು ಹೊರಟಿದ್ದರು. ನಮ್ಮನ್ನು ನೋಡಿ, ಟಬ್‌ನಲ್ಲಿದ್ದ ನೀರನ್ನು ತಮ್ಮ ತಲೆಗೆ ಚಿಮುಕಿಸಿಕೊಂಡರು. ಬಳಿಕ ಕೋಣೆಗೆ ಬಂದು, ನನ್ನ ಪತ್ನಿಯನ್ನು ಕರೆದು, ಅವಳ ಕೆನ್ನೆಯನ್ನು ಹಿಡಿದು ಪಕ್ಕಕ್ಕೆ ಸೆಳೆದುಕೊಂಡು ನೋಡಿದರು. ಬಳಿಕ, ''ಆಹಾ! ನನ್ನ ಸೊಸೆ ಚೆನ್ನಾಗಿದ್ದಾಳೆ!'' ಎಂದರು.

ಆಕೆ ತೀರಿಕೊಂಡ ವಿಷಯವನ್ನು ಕೇಳಿ ಶ್ರೀಮಾತೆಯವರು ಅಳುತ್ತ ಯೋಗಿನ್–ಮಾಗೆ ಹೇಳಿದರು: ''ಚೇಳು ಕಡಿದರೆ ಎಷ್ಟು ನೋವಾಗುವುದೋ ಹಾಗೆ, ಸೊಸೆ ತೀರಿಕೊಂಡು ನನಗೂ ಅಷ್ಟೇ ನೋವಾಗುತ್ತಿದೆ.'' ಶ್ರೀರಾಮಕೃಷ್ಣರ (ಭಾವಚಿತ್ರದ) ಕಡೆಗೆ ನೋಡಿ ಕೈಜೋಡಿಸಿ ಹೀಗೆಂದರು: ''ಠಾಕೂರ್, ಸೊಸೆಗೆ ಮತ್ತೆ ಜನ್ಮವುಂಟಾಗದ ಹಾಗೆ ಮಾಡಿ. ನಿಮ್ಮ ಪಾದಪದ್ಮಗಳು ಅವಳ ಸ್ಥಾನವಾಗುವಂತೆ ಮಾಡಿ.'' ವರಾಂಡಕ್ಕೆ ಬಂದು ಹೇಳಿದರು, ''ಯಾರನ್ನು ಪ್ರೀತಿಸುತ್ತೇನೋ, ಅವರ ಇಹವನ್ನಂತೂ ನೋಡುತ್ತೇನೆ; ಅವರ ಪರವನ್ನೂ ನೋಡುವ ತನಕ ಮನಸ್ಸು ಸಮಾಧಾನ ಹೊಂದುವುದಿಲ್ಲ. ವಿಭೂತಿ, ಪ್ರೀತಿಯೇ ಎಲ್ಲವೂ ಆಗಿದೆ.''

ಅಮೆರಿಕಾದಿಂದ ಕಾಳೀ ಮಹಾರಾಜ್ (ಸ್ವಾಮಿ ಅಭೇದಾನಂದರು) ಬೇಲೂರು ಮಠಕ್ಕೆ ಐವತ್ತು ರೂಪಾಯಿ ಕಳುಹಿಸಿದ್ದರು. ಬಾಬುರಾಮ ಮಹಾರಾಜ್ (ಸ್ವಾಮಿ ಪ್ರೇಮಾನಂದರು) ಈ ವಿಷಯವನ್ನು ತಿಳಿಸಿ ಶ್ರೀಮಾತೆಯವರಿಗೆ ಪತ್ರ ಬರೆದಿದ್ದರು. ಶ್ರೀಮಾತೆಯವರು ಆಗ ತನ್ನ ಹೊಸ ಮನೆಯಲ್ಲಿ ಕುಳಿತಿದ್ದರು. ಪತ್ರವನ್ನು ಓದಿಸಿ ಕೇಳಿ ಅವರೆಂದರು: ''ಕಾಳಿ ತನಗೇ ಮಂಗಳವನ್ನುಂಟುಮಾಡಿಕೊಂಡ.''

ಒಂದು ದಿನ ಶ್ರೀಮಾತೆ ಹೇಳಿದರು: ''ನನಗೆ ಶರತ್ ಇದ್ದಾನೆ. ಇನ್ನು ರಾಧುವನ್ನು ಕುರಿತು ಚಿಂತೆಯೇಕೆ? ಶರತ್ ಎಲ್ಲರನ್ನೂ ನೋಡಿಕೊಳ್ಳುವನು – ಶರತ್ ವಿಷ್ಣುವಿನ ಅಂಶದಿಂದ ಜನ್ಮವೆತ್ತಿದ್ದಾನೆ.''

(ಕೃಷ್ಣಲಾಲ್ ಮಹಾರಾಜರಿಗೆ)– ''ನಾನು ಯಾರ ದೋಷವನ್ನೂ ನೋಡಲಾರೆ. ಗೋಲಾಪ್‌ಳತ್ತ ಕೈತೋರಿಸಿ ಠಾಕೂರ್ ಒಂದು ದಿನ ನನ್ನನ್ನು ಕೇಳಿದರು, 'ಈಕೆ ಹೇಗಿದ್ದಾಳೆ? ಅವಳಿಗೆ ಸ್ವಲ್ಪವೂ ನಾಚಿಕೆಯಿಲ್ಲ ಅಂತ ಎಲ್ಲರೂ ಹೇಳುತ್ತಾರಲ್ಲ?' ಠಾಕೂರರು ನನ್ನನ್ನು ಕಾಪಾಡಿದರು. ನಾನಂದೆ, 'ನಾನಂತೂ ಯಾರ ದೋಷವನ್ನೂ ನೋಡಲಾರೆ.' ನೋಡು, ನಿಜವಾಗಿಯೂ ಹಾಗಲ್ಲವೇ, ನಾನು ಸತ್ಯವನ್ನೇ ಹೇಳಿದೆ. ಆ ದಿನಗಳು ಹೇಗೆ ಕಳೆದುಹೋದವು ನೋಡು!''

ಶ್ರೀಮಾತೆಯವರ ಬಾಯಿಯಿಂದಲೇ ಕೇಳಿದೆ – ಯುಗಾದ್ಯದ (ಇದೊಂದು ಶಕ್ತಿಪೀಠ; ಪ್ರಸಿದ್ಧ ದೇವೀ ದೇವಾಲಯ; ಪಶ್ಚಿಮ ಬಂಗಾಳದ ವರ್ಧಮಾನ ಜಿಲ್ಲೆಯಲ್ಲಿದೆ) ಪುರೋಹಿತನು 'ಇನ್ನು ನಿನ್ನ ಸೇವೆ ಮಾಡಲಾರೆ' ಎಂದು ಊರು ಬಿಟ್ಟು ಓಡಿ ಹೋಗುತ್ತಿದ್ದ. ದಾರಿಯ ಮಧ್ಯೆ ಪುರೋಹಿತನಿಗೆ ಶ್ರೀಮಾತೆ

ದರ್ಶನ ನೀಡಿ ಹೇಳಿದರು, ''ಯಾರ ಭಯ ದಿಂದ ನೀನು ಓಡಿ ಹೋಗುತ್ತಿದ್ದೀಯೋ, ಅದೇ ದೇವತೆ ನಾನು!''

**೨೪. ಭೂಷಣಚಂದ್ರ ಪೂಯಿಲ್ಯ**

ನನ್ನ ಮಾವ ಶಿವದಾಸ ದಲೂಯಿ ಹಾಗೂ ಅವರ ಚಿಕ್ಕಪ್ಪ ಯತೀಂದ್ರನಾಥ ದಲೂಯಿ ಅವರೊಂದಿಗೆ ನಾನು ಜಯ ರಾಮಬಾಟಿಗೆ ಹೋಗುತ್ತಿದ್ದೆ. ಕೋಯಲ್‌ಪಾರಾ ಮಠದಲ್ಲಿ ಊಟಮಾಡಿ, ಸಾಯಂಕಾಲ ಶ್ರೀಮಾತೆಯವರ ಮನೆಯನ್ನು ತಲುಪಿದೆವು. ನಾನು ಅವರ ಮನೆಯೊಳಕ್ಕೆ ಹೋಗಿ, ಮಂತ್ರ ದೀಕ್ಷೆ ನೀಡಬೇಕೆಂದು ಅವರನ್ನು ಪ್ರಾರ್ಥಿಸಿಕೊಂಡೆ. ಶ್ರೀಮಾತೆ ಯವರು ಒಪ್ಪದಿದ್ದಾಗ ನಾನು ಆವೇಗದಿಂದ ಹೇಳಿದೆ: ''ನಿಮಗೆ ಒಬ್ಬ ಬಾಗ್ದಿ (ಕೆಳಜಾತಿಯವರು) ತಂದೆ ಇದ್ದರು; ಒಬ್ಬ ಬಾಗ್ದಿ –ಮಗ ಏಕೆ ಇರಬಾರದು?'' ಪ್ರಸಾದ ಪಡೆದುಕೊಳ್ಳಲು ಶ್ರೀಮಾತೆ ಹೇಳಿದಾಗ ನಾನು ಹೇಳಿದೆ: ''ನಮಗೆ ಮಂತ್ರದೀಕ್ಷೆ ನೀಡದಿದ್ದರೆ ನಾವು ಇಲ್ಲಿ ಊಟ ಮಾಡಲಾರೆವು.'' ರಾತ್ರಿ ಉಪ ವಾಸವಿದ್ದೆ. ಶ್ರೀಮಾತೆ ಕೂಡ ಊಟ ಮಾಡಲಿಲ್ಲ. ಮರುದಿನ ಬೆಳಿಗ್ಗೆ ಪ್ರಸನ್ನ ಮಾವ ಬಂದು ಹೇಳಿದರು, ''ಅಕ್ಕ ಹೇಳು ತ್ತಿದ್ದಾರೆ, 'ನನ್ನ ಮಕ್ಕಳಿಗೆ ಸ್ನಾನ ಮಾಡಿ ಬರಲು ಹೇಳು, ಅವರಿಗೆ ನಾನು ಮಂತ್ರದೀಕ್ಷೆ ನೀಡುತ್ತೇನೆ' ಅಂತ.''

**೨೫. ಮಹಿಮಚಂದ್ರ ದತ್ತ**

ಸಮರೇಂದ್ರ ಮುಖರ್ಜಿ ಮೇದಿನೀಪುರದಲ್ಲಿ ಸಿವಿಲ್ ಕೋರ್ಟ್‌ನಲ್ಲಿ ಕೆಲಸ ಮಾಡುತ್ತಿದ್ದ. ಅನಂತರ ಕಲ್ಕತ್ತೆಗೆ ಹೋಗಿ, ಅಧ್ಯಾಪಕನಾಗಿ ಕೆಲಸ ಮಾಡುತ್ತಿದ್ದ. ಒಂದು ದಿನ ಅವನು ಭಾವುಕನಾಗಿ ಶ್ರೀಮಾತೆಯವರಿಗೆ ಹೇಳಿದ: ''ಅಮ್ಮಾ, ನನ್ನದು ಎಂಥ ಸೌಭಾಗ್ಯ! ಹೇರಳವಾಗಿ ನಿಮ್ಮ ಶ್ರೀಚರಣಗಳ ದರ್ಶನ ವಾಗುತ್ತಿದೆ.'' ''ಈ ಸೌಭಾಗ್ಯದಿಂದಾಗಿಯೇ ನಿನಗೆ ಅಲ್ಲಿನ ಕೆಲಸವನ್ನು ಬಿಡಿಸಿ, ಕಲ್ಕತ್ತೆಗೆ ಕರೆತಂದಿದ್ದೇನೆ.'' ಎಂದರು ಶ್ರೀಮಾತೆ. ಸಮರೇಂದ್ರ ಬಾಬು ಹೇಳಿದ: ''ಅಮ್ಮಾ, ನಿಮ್ಮ ಕೃಪೆ ಬಹಳ ದೊಡ್ಡದು.'' ಅದಕ್ಕೆ ಶ್ರೀಮಾತೆ, ''ನನ್ನ ಕೃಪೆಯಿಲ್ಲದಿದ್ದರೆ ಇಲ್ಲಿಗೆ ಯಾರಿಗೆ ಬರಲು ಸಾಧ್ಯವಾಗುವುದು?'' ಎಂದರು.

**೨೬. ಯಾಮಿನೀ ದೇವಿ**

ಜಗದಂಬಾ ಆಶ್ರಮದಲ್ಲಿ ಬೆಳಗಿನ ಹೊತ್ತು ಶ್ರೀಮಾತೆ ಯವರು ನನ್ನನ್ನು ತಮ್ಮ ಬಳಿಗೆ ಕರೆದು ಹೇಳಿದರು: ''ನೀನು ಈಗಲೇ ಸ್ನಾನ ಮಾಡಿ ಬಾ, ನಿನಗೆ ಮಂತ್ರದೀಕ್ಷೆ ನೀಡುತ್ತೇನೆ.'' ಮಂತ್ರದೀಕ್ಷೆ ಪಡೆಯಲು ಕುಳಿತಾಗ ನನ್ನ ಬಳಿ ಏನೂ ಇಲ್ಲ ದಿದ್ದುದನ್ನು ಕಂಡು, ಶ್ರೀಮಾತೆಯವರು ಒಂದು ಅಳಲೆಕಾಯಿ ಯನ್ನು ನನ್ನ ಕೈಗೆ ಕೊಟ್ಟು, ''ಇನ್ನೇನು ಕೊಡುತ್ತೀಯಮ್ಮಾ? ಈ ಅಳಲೆಕಾಯಿಯನ್ನೇ ತೆಗೆದುಕೋ'' ಎಂದರು. ಮಂತ್ರದೀಕ್ಷೆ ಯಾದ ನಂತರ ಆ ಅಳಲೆಕಾಯಿಯನ್ನೇ ಅವರ ಕೈಗೆ ಕೊಟ್ಟು ಪ್ರಣಾಮ ಮಾಡಿದೆ.

ಕೊನೆಯಬಾರಿ ಶ್ರೀಮಾತೆಯವರು ಕಲ್ಕತ್ತೆಗೆ ಹೋಗುವಾಗ, ದಾರಿಯಲ್ಲಿ ಸುರೇಶ್ವರ ಸೇನನ ಮನೆಯಿಂದ ವಿಷ್ಣುಪುರ ರೈಲ್ವೇ ಸ್ಟೇಶನ್ನಿಗೆ ಬಂದು ತಲುಪಿದರು. ಸ್ಟೇಶನ್ ಮಾಸ್ಟರ್ ಕೈಜೋಡಿಸಿ ಅಳುತ್ತ ಹೇಳಿದ, ''ಅಮ್ಮಾ, ದಯೆತೋರಿ ಒಂದು ಸಲ ನಮ್ಮ ಮನೆಗೆ ನಿಮ್ಮ ಪಾದಧೂಳಿಯ ಸ್ಪರ್ಶ ಮಾಡಿಸಬೇಕು. ಬನ್ನಿ.'' ಅದಕ್ಕೆ ಶ್ರೀಮಾತೆ, ''ಈ ಬಾರಿ ಸಾಧ್ಯವಾಗದು. ಮುಂದೆ ಯಾವಾಗ ಬರುತ್ತೇನೋ ಆಗ ನೋಡೋಣ.''

**೨೭. ರಾಧಾರಾಣಿ ಚಟ್ಟೋಪಾಧ್ಯಾಯ (ರಾಧು)**

ಶ್ರೀಮಾತೆಯವರು ದೇವದೇವತೆಯರಿಗೆ ಪ್ರಣಾಮ ಮಾಡು ತ್ತಿದ್ದರು. ಆಗ ಅವರು ಹೇಳುತ್ತಿದ್ದರು: ''ಅಮ್ಮಾ, ಚಿತ್ತೇಶ್ವರಿ, ನನ್ನ ಚಿತ್ತವನ್ನು ತಣ್ಣಗಿರಿಸು'' ಎಂದು. ಶೀತಲಾಮಾತೆಗೆ, ''ಶೀತಲಾ, ರೋಗನಾಶಿನಿ, ದಾರಿದ್ರ್ಯನಾಶಿನಿ, ದುಃಖನಾಶಿನಿ'' ಎನ್ನು ತ್ತಿದ್ದರು. ಅದಲ್ಲದೆ, ''ತಾಯಿಗೆ ಸಮಾನವಾಗಿ ಶರೀರ ಪಾಲನೆ ಮಾಡುವವರು ಯಾರೂ ಇಲ್ಲ, ಚಿಂತೆಯ ಹಾಗೆ ಶರೀರ ಶೋಷಣೆ ಮಾಡುವುದು ಯಾವುದೂ ಇಲ್ಲ. ತಾಯಿಗೆ ಸಮಾನ ವಾಗಿ ಮಕ್ಕಳನ್ನು ಕಾಪಾಡಲು ಯಾರೂ ಅರಿಯರು'' ಎಂದು ಹೇಳುತ್ತಿದ್ದರು.

ಶ್ರೀಮಾತೆಯವರು ಕೊಆಲ್‌ಪಾಡಾದಲ್ಲಿ (ಒರಿಸ್ಸಾ) ಇದ್ದಾಗ 'ಕೋನೋ ಕೊರಿಲಾ ರೇ ನಂದರ್ ಟಿಕಿ ಪಿಲಾಟಿ' ಎಂಬ ಹಾಡನ್ನು ಕಲಿಸಿದ್ದರು.

**೨೮. ಸುವಾಸಿನೀ ದೇವಿ**

ರಾತ್ರಿಹೊತ್ತು ಎಲ್ಲರ ಊಟವಾದ ನಂತರ ಪದ್ಮಾಪಾರದಿಂದ (ಈಗಿನ ಬಾಂಗ್ಲಾದೇಶದಲ್ಲಿದೆ) ಸ್ತ್ರೀಪುರುಷರೆಲ್ಲ ಸೇರಿದಂತೆ ಆರು–ಏಳು ಮಂದಿ ಭಕ್ತರು ಬಂದುಬಿಟ್ಟರು. ನಾನು ಊಟ ಬಡಿಸುತ್ತಿದ್ದೆ; ಪಾತ್ರೆಯಲ್ಲಿ ಅನ್ನವಿಲ್ಲ ಎಂದು ನನಗೆ ಗೊತ್ತಿತ್ತು. ಶ್ರೀಮಾತೆ ಹೇಳಿದರು: ''ಪಾತ್ರೆಯಲ್ಲಿ ಅನ್ನವಿದೆ.'' ನಳಿನಿ ಹಾಗೂ ನಾನು ಇಬ್ಬರೂ ಹೋಗಿ ನೋಡಿದೆವು, ಪಾತ್ರೆಯಲ್ಲಿ ಸ್ವಲ್ಪವೂ ಅನ್ನವಿರಲಿಲ್ಲ. ''ಅನ್ನ ಇದೆ ಅಂತ ನನ್ನ ಮನಸ್ಸು ಹೇಳುತ್ತಿದೆ'' ಎಂದವರೇ, ಶ್ರೀಮಾತೆ ತಾವೇ ಹೋಗಿ ನೋಡಿ ದರು. ಇಬ್ಬರು–ಮೂವರಿಗೆ ಸಾಕಾಗುವಷ್ಟು ಅನ್ನವನ್ನು ಅದ ರಿಂದ ಹೊರತೆಗೆದರು. ಎಲ್ಲರಿಗೂ ಊಟ ಮಾಡಲು ಬೇಕಾ ದಷ್ಟು ಚಪಾತಿಯಿತ್ತು; ಅದನ್ನು ಹಾಗೂ ಅನ್ನವನ್ನು ಸೇರಿಸಿ ಬಡಿಸಿದಾಗ, ಎಲ್ಲರಿಗೂ ರಾತ್ರಿಯ ಊಟಕ್ಕೆ ಅದು ಸಾಕಾಯಿತು.

**೨೯. ಸುಶೀಲಾಬಾಲಾ ದತ್ತ**

'ಮನ್ ಹೊಲೊ ನಾ ಕಥಾರ್ ಬಾಧ್ಯ, ಸಾಧ್ಯ ನಾಯಿ ಆರ್ ಸಾಧನೇ' ಈ ಪದ್ಯದ ಸಾಲುಗಳನ್ನು ಕೋಣೆ ಗುಡಿಸುವಾಗ ನನ್ನಲ್ಲೇ ನಾನು ಹಾಡಿಕೊಳ್ಳುತ್ತಿದ್ದೆ. ಅದನ್ನು ಕೇಳಿದ ಶ್ರೀಮಾತೆ ಯವರು ಹೇಳಿದರು, ''ಹಾಡು ತುಂಬಾ ಚೆನ್ನಾಗಿದೆ. ಭಾವ ಪೂರ್ಣವಾದ ಹಾಡು. ಇಡೀ ಹಾಡನ್ನು ಹಾಡಿ ತೋರಿಸು'' ಎಂದರು. ಆದರೆ ನನಗೆ ಇಡೀ ಹಾಡು ಗೊತ್ತಿರಲಿಲ್ಲ.

ಸಾವಿನ ಸೂತಕದಿಂದ ಇದ್ದಾಗ ನಾನು ಕೆಲವು ದಿನಗಳ ಮಟ್ಟಿಗೆ ಶ್ರೀಮಾತೆ ಬಳಿ ಇದ್ದೆ. ದೇವರ ಕೋಣೆಗೆ ಹೋಗಿ ಬಂದು ಮಾಡುತ್ತಿದ್ದೆ. ಶ್ರೀಮಾತೆಯವರ ಮಂಚದ ಬಳಿ ಮಲಗುತ್ತಿದ್ದೆ. ಸಂಜೆ ಹೊತ್ತು ಅನೇಕ ಮಂದಿ ಸ್ತ್ರೀಯರು ಶ್ರೀಮಾತೆಯವರ ಬಳಿ ಕುಳಿತು, ಇನ್‌ಫ್ಲುಯೆಂಜಾ ಜ್ವರದಿಂದ ತಮ್ಮ ಬಂಧುಗಳು ಅನೇಕರು ತೀರಿಕೊಂಡ ವಿಚಾರವಾಗಿ ಹೇಳಿಕೊಳ್ಳುತ್ತಿದ್ದರು. ನಾನು ಕೂಡ ನನ್ನ ಮಾವನ ತಮ್ಮ ತೀರಿಕೊಂಡ ವಿಚಾರವಾಗಿ ಹೇಳಹೊರಟಿದ್ದೆ; ಆದರೆ ಶ್ರೀಮಾತೆಯವರು ಕಣ್ಣಸನ್ನೆ ಮೂಲಕ ಹೇಳದಂತೆ ತಡೆದರು. ಬೆಳಿಗ್ಗೆ ಅವರ ಬಳಿಗೆ ಹೋದಾಗ ಹೇಳಿದರು, ''ಆ ವಿಷಯವನ್ನು ಯಾರೆಂದರೆ ಅವರಿಗೆಲ್ಲ ಹೇಳಬಹುದೆ? ಎಲ್ಲರ ಮನಸ್ಸೂ ಒಂದೇ ರೀತಿ ಇರಲಾರದು.''

**೩೦. ಹರಿನಾಥ ಬಂದ್ಯೋಪಾಧ್ಯಾಯ**

ನಾನು ಎರಡನೇ ಬಾರಿ ಜಯರಾಮಬಾಟಿಗೆ ಹೋದಾಗ, ಒಂದು ದಿನ ಮಧ್ಯಾಹ್ನ ವಿಶ್ರಾಂತಿ ಬಳಿಕ, ಸಂಜೆ ಹೊತ್ತು ಶ್ರೀಮಾತೆಯವರ ಹಳೆಯ ಮನೆಗೆ ಹೋಗಿದ್ದೆ. ಅಲ್ಲಿ ಶ್ರೀಮಾತೆಯವರು ಕಾಲುಗಳನ್ನು ನೀಡಿ ಕುಳಿತಿದ್ದರು. ಅವರಿಗೆ ಪ್ರಣಾಮ ಮಾಡಿ, ಅವರ ಪಾದಗಳನ್ನು ನನ್ನ ತಲೆಯ ಮೇಲಿಟ್ಟು ಹೇಳಿದೆ: ''ಇದೇ ರೀತಿಯ ಅನುಭವ ನನಗೆ ಹೇರಳವಾಗಿ ಇರಲಿ.'' ಅದಕ್ಕೆ ಶ್ರೀಮಾತೆ, ''ಇರುತ್ತದೆ'' ಎಂದರು.

ನಾನು ಅವರ ಪಾದಗಳ ಬಳಿ ಕುಳಿತಿದ್ದೆ; ಆದರೆ ಮನಸ್ಸಿನಲ್ಲಿ ವಿರುದ್ಧ ಭಾವನೆಗಳು ಏಳುತ್ತಿವೆ. ಒಂದು ಸಲ ಮನಸ್ಸು ಹೇಳುತ್ತಿದೆ, ಇವರು ಸಾಮಾನ್ಯ ಹೆಂಗಸು ಅಷ್ಟೆ, ಎಂದು. ಮನಸ್ಸಿನಲ್ಲಿ ಅವರು ಭಗವತಿ ಎಂಬ ಭಾವನೆ ಉಂಟಾದಾಗ, ಅವರ ಮೇಲೆ ಭಕ್ತಿ, ವಿಶ್ವಾಸ ಹೆಚ್ಚುತ್ತದೆ; ಅವರು ಮಾನವ ವ್ಯಕ್ತಿಯೇ ಆಗಿದ್ದಾರೆ ಎಂಬ ಭಾವನೆ ಉಂಟಾದಾಗ ಮನಸ್ಸಿನಲ್ಲಿದ್ದ ಭಕ್ತಿ, ವಿಶ್ವಾಸ ಹೊರಟುಹೋಗುತ್ತದೆ. ಇದರಿಂದ ಮನಸ್ಸು ಕೆಟ್ಟು ಹೋಯಿತು. ಶ್ರೀಮಾತೆಯವರ ಹತ್ತಿರ ಕುಳಿತಿದ್ದಾಗಲೇ ಇಂಥಾ ಅವಸ್ಥೆ ನನಗೆ; ಇನ್ನು ದೂರ ಹೊರಟುಹೋದರೆ ಅವರನ್ನು ಮರೆತೇ ಬಿಡಬಹುದು. ನನಗೆ ಭಯವುಂಟಾಗಿ, ಹೇಳಿದೆ: ''ಅಮ್ಮಾ, ನಾನು ನಿಮ್ಮ ಬಳಿ ಒಂದು ಮಾತು ಹೇಳುತ್ತೇನೆ. ಆದರೆ ನೀವು ಕೋಪಿಸಿಕೊಳ್ಳಬಾರದು.'' ಶ್ರೀಮಾತೆ ಹೇಳಿದರು, ''ನಿನಗೆ ಏನು ಹೇಳಬೇಕೆನಿಸುತ್ತದೋ ಹೇಳು. ನಾನೇಕೆ ಕೋಪಮಾಡಿಕೊಳ್ಳಲಿ?'' ನನ್ನ ಮನಸ್ಸಿನ ಅವಸ್ಥೆಯ ಬಗ್ಗೆ ಶ್ರೀಮಾತೆಯವರಿಗೆ ವಿವರಿಸಿ ಹೇಳಿದೆ. ಆದ ಅವರೆಂದರು, ''ನಾನಾದರೋ ಸಾಮಾನ್ಯ ಹೆಂಗಸು. ಅದರಿಂದ ಏನಾಯಿತು? ತಾಯಿ ಎಂಬ ಅರಿವು ಇದ್ದರೂ ಸಾಕಲ್ಲವೆ?'' ಅದಕ್ಕೆ ನಾನಂದೆ. ''ಯಾವಾಗ ಭಕ್ತಿ, ವಿಶ್ವಾಸವೇ ಇರಲಾರದೋ ಆಗ ತಾಯಿ ಎಂಬ ಅರಿವಾದರೂ ಹೇಗೆ ಇದ್ದೀತು ಅನ್ನೋಣ?'' ಅವರ ಪಾದಗಳನ್ನು ನನ್ನ ತಲೆಯ ಮೇಲಿಟ್ಟುಕೊಂಡು ಹೇಳಿದೆ, ''ನೀವು ಹೇಳಲೇಬೇಕು–ನೀನು ನನ್ನನ್ನು ಬಿಟ್ಟುಬಿಟ್ಟರೂ ನಾನು ನಿನ್ನನ್ನು ಬಿಡಲಾರೆ–ಅಂತ.'' ಶ್ರೀಮಾತೆ ಹೇಳಿದರು: ''ಅದರಿಂದ ಏನಾಗುವುದು? ನೀನು ಪ್ರಾರ್ಥಿಸಿದರೆ ಪಡೆಯುವೆ.'' ಆಗ ನಾನಂದೆ, ''ನಾನು ನಿಮಗೆ ಪ್ರಾರ್ಥಿಸದೆ ಹೋದರೆ? ನೀವು ಹಾಗೆ ಹೇಳಲೇಬೇಕು.'' ಹೀಗೆ ಮಾತು-ಪ್ರತಿ ಮಾತುಗಳ ನಂತರ ಶ್ರೀಮಾತೆ ಹೇಳಿದರು: ''ಸರಿ ಮಗೂ, ಹಾಗೇ ಆಗಲಿ.'' ಮೇಲಿನ ಮಾತುಗಳನ್ನು ಅದೇ ರೀತಿ ಹಠ ಹಿಡಿದು ಅವರಿಂದ ಹೇಳಿಸಿದ್ದಕ್ಕಾಗಿ ಶ್ರೀಮಾತೆ ನಗುಮುಖದಿಂದ ಹೇಳಿದರು – ''ನೀನು ನನ್ನನ್ನು ಬಿಟ್ಟರೂ ನಾನು ನಿನ್ನನ್ನು ಬಿಡಲಾರೆ.''

## ಭಾಗ ಎರಡು

(ಈ ಭಾಗದಲ್ಲಿ ಸಂಗ್ರಹಿಸಲ್ಪಟ್ಟ ಭಾಗಗಳ ಬಗ್ಗೆ ಹಿಂದೆ ಹೇಳಿದ 'ಪಾಂಚ್ ಫೂಲೇರ್ ಸಾಜಿ' ಗ್ರಂಥದಲ್ಲಿ ಉಲ್ಲೇಖಗೊಂಡಿಲ್ಲ.)

ಸ್ವಾಮೀಜಿ ಕಾಮಾರಪುಕುರ ಹಾಗೂ ಜಯರಾಮಬಾಟಿಗೆ ಹೋಗಿದ್ದರೇ ಇಲ್ಲವೇ ಎಂಬುದನ್ನು ತಿಳಿಯಬಯಸಿದಾಗ ಶ್ರೀಮಾತೆ ಹೇಳಿದರು: ''ನರೇನ್ ಎರಡು ಬಾರಿ ಪ್ರಯತ್ನಿಸಿದರೂ ಇಲ್ಲಿಗೆ ಬರಲಾಗಲಿಲ್ಲ. ಇದಕ್ಕಾಗಿ ಅವನಿಗೆ ತುಂಬಾ ದುಃಖವುಂಟಾಗಿತ್ತು. ಠಾಕೂರರು ಯಾಕೆ ಅವನನ್ನು ಇಲ್ಲಿಗೆ ಬರಗೊಡಲಿಲ್ಲ ಎಂಬುದು ಅವರಿಗೇ ಗೊತ್ತು.''

ಹರಿಪ್ರೇಮ ಮಹಾರಾಜ್ (ಸ್ವಾಮಿ ಹರಿಪ್ರೇಮಾನಂದರು) ಕೋಯಲ್ ಪಾರಾದಿಂದ ಹೂವು, ಸೊಪ್ಪು-ತರಕಾರಿಗಳನ್ನು ತಂದಿದ್ದರು. ಶ್ರೀಮಾತೆ ಕೇಳಿದರು, ''ಮಗೂ, ನೀನು ಕೇದಾರನ ಬಳಿ ಇದ್ದೀಯೆ, ಅವನು ತುಂಬಾ ಪ್ರೀತಿಸುತ್ತಿದ್ದಾನೆ ಅಲ್ಲವೆ? ಕಾಳಜಿ ವಹಿಸುತ್ತಾನಲ್ಲವೆ?'' ಹರಿಪ್ರೇಮ ಮಹಾರಾಜ್ ಹೇಳಿದರು, ''ಹೌದಮ್ಮಾ, ತುಂಬಾ ಪ್ರೀತಿಸುತ್ತಾರೆ. ಆದರೂ ನನಗೆ ಇನ್ನುಮೇಲೆ ದನ ಮೇಯಿಸುವ ಕೆಲಸ ಮಾಡಲು ಸಾಧ್ಯವಿಲ್ಲ.'' ಶ್ರೀಮಾತೆ ಹೇಳಿದರು, ''ಮಕ್ಕಳು ಇಲ್ಲಿಗೆ ಬಂದ ಮೇಲೆ ಒಂದಿಷ್ಟು ಧ್ಯಾನ-ಜಪ ಮಾಡಲಾಗದೆ? ನೀನು ನನ್ನ ಬಳಿಗೆ ಬಂದು ಬಿಡು.'' ಎರಡು-ಮೂರು ದಿನಗಳ ನಂತರ ಅವರು ಶ್ರೀಮಾತೆಯವರ ಬಳಿಗೆ ಅವರ ಹೊಸ ಮನೆಗೆ ಬಂದುಬಿಟ್ಟರು. ಶ್ರೀಮಾತೆಯವರು ಹೆಚ್ಚಾಗಿ, ''ಹರಿ, ನೀನು ನನ್ನ ಕಾಲುಗಳಿಗೆ ತುಸು ವಾತದ ತೈಲ ಹಚ್ಚಿ ಮಾಲಿಶ್ ಮಾಡಿಕೊಡಪ್ಪಾ'' ಎನ್ನುತ್ತಿದ್ದರು. ಹೆಣ್ಣುಮಕ್ಕಳು ಹೇಳುತ್ತಿದ್ದರು, ''ಹರಿ ನಮ್ಮ ಕೆಲಸ ಮಾಡಿಕೊಡುವ ಹುಡುಗ. ಅವನನ್ನು ನಾನು ನನ್ನ ವಿಧವೆ ಮಗಳೆಂದೇ ಭಾವಿಸುತ್ತೇನೆ.''

ಶ್ರೀಮಾತೆಯವರ ಮನೆಯಲ್ಲಿ ಅಡಿಗೆ ಕೆಲಸ ಮಾಡಲು ಕಷ್ಟವಾಗುತ್ತಿದೆ ಎಂದು ಭಾವಿಸಿ ಕಾಳೀಮಾಮ ಒಬ್ಬ ಬ್ರಾಹ್ಮಣ ಅಡುಗೆಯವನನ್ನು ಗೊತ್ತು ಮಾಡಲು ಹೇಳಿದ್ದರು. ಅದಕ್ಕೆ ಶ್ರೀಮಾತೆ ಹೇಳಿದರು: ''ನಾನು ಹೆಣ್ಣು ಮಕ್ಕಳೊಂದಿಗೆ ಬದುಕುತ್ತಿದ್ದೇನೆ. ಇಲ್ಲಿ ಗಂಡುಮಕ್ಕಳನ್ನು ಗೊತ್ತುಮಾಡುವುದೆ? ಆದರೂ ಇಲ್ಲಿ (ಸೇವಕರು) ಇದ್ದಾರಲ್ಲ, ಇವರೆಲ್ಲ ನನ್ನ ಹೆಣ್ಣುಮಕ್ಕಳು.''

ಪ್ರಬೋಧಬಾಬು (ಪ್ರಬೋಧಚಂದ್ರ ಚಟ್ಟೋಪಾಧ್ಯಾಯ) ಯಾರೋ ಒಬ್ಬ ಭಕ್ತನ ಕೆಟ್ಟ ಚಾರಿತ್ರ್ಯದ ಬಗ್ಗೆ ಹೇಳತೊಡಗುತ್ತಲೇ ಶ್ರೀಮಾತೆ ಹೇಳಿದರು: ''ನಿಮಗಂತೂ ಒಳ್ಳೆಯದೇನನ್ನೂ ಹಿಡಿದಿಟ್ಟುಕೊಳ್ಳಲಾಗುವುದಿಲ್ಲ. ಇಲ್ಲಿಗೆ ಬಂದು ಬರೀ ಕೆಟ್ಟದನ್ನು ಮಾತ್ರ ಹೇಳುತ್ತೀರಿ. ಅವನಿಗೆ ಏನಾಗಿದೆಯಂತೆ? ಬ್ರಹ್ಮ ವಿಷ್ಣು ಇವರೆಲ್ಲ ಬಂದರೂ ಅವರಿಗೇನೂ ಮಾಡಲಾಗದು.''

ಶ್ರೀಮಾತೆಯವರು ತಮ್ಮ ಹಾಸಿಗೆ ಇತ್ಯಾದಿಗಳನ್ನು ಇತರರಿಗೆ ಬಳಸಲು ಬಿಡುತ್ತಿರಲಿಲ್ಲ. ಬಳಸಲು ಕೊಟ್ಟರೂ, ಅವರು ಮತ್ತೆ ಅದನ್ನು ಬಳಸುತ್ತಿರಲಿಲ್ಲ. ಆದರೆ ಕೊನೆಕೊನೆಗೆ ಈ ನಿಯಮದಲ್ಲಿ ಬದಲಾವಣೆ ಉಂಟಾಯಿತು. ಜಗದಂಬಾ ಆಶ್ರಮದಲ್ಲಿ ಒಂದು ದಿನ ರಾತ್ರಿ ಶ್ರೀಮಾತೆಯವರು ಯಾಮಿನಿಯನ್ನು ತಮ್ಮ ಹಾಸಿಗೆಯಲ್ಲೇ ಮಲಗಿಸಿಕೊಂಡರು. ಸ್ವಲ್ಪ ಹೊತ್ತಿನ ನಂತರ ರಾಧು ಎದ್ದು ಕುಳಿತು ಹೇಳತೊಡಗಿದಳು, ''ಯಾರು ಮಲಗಿದ್ದಾರಮ್ಮಾ, ಹಾಸಿಗೆಯಲ್ಲಿ ಯಾರು ಮಲಗಿದ್ದಾರೆ?'' ಅದಕ್ಕೆ ಶ್ರೀಮಾತೆ ಹೇಳಿದರು, ''ಹಾಸಿಗೆ ಹಾಗೇ ಬಿದ್ದಿದೆ ನೋಡಮ್ಮಾ.'' ರಾಧು ಅತ್ತ ನೋಡಿದಾಗ ಅಲ್ಲಿ ಯಾರೂ ಇಲ್ಲ! ಸ್ವಲ್ಪ ಹೊತ್ತಿನ ನಂತರ ಮತ್ತೆ ರಾಧು, ''ಹಾಸಿಗೆಯಲ್ಲಿ ಯಾರು ಮಲಗಿದ್ದಾರೆ?'' ಎಂದೆಲ್ಲ ಹೇಳತೊಡಗಿದಳು. ಶ್ರೀಮಾತೆಯವರು ಯಾಮಿನಿಯ ಮೇಲೆ ಹೊದ್ದಿದ್ದ ಕಂಬಳಿಯನ್ನು ಸರಿಸಿ, ''ಮತ್ತೆ ಮತ್ತೆ ನನಗೆ ಕೋಪ ಬರಿಸುತ್ತಿದ್ದೀಯೆ, ಇದೋ ನೋಡು ಯಾರಿದ್ದಾರೆ ಅಂತ'' ಎಂದರು. ರಾಧು ಎದ್ದು ಕುಳಿತು ಚೆನ್ನಾಗಿ ನೋಡಿದಳು; ಅಲ್ಲಿ ಯಾರನ್ನೂ ಕಾಣದೆ ಮತ್ತೆ ಮಲಗಿಕೊಂಡಳು.

ಶ್ರೀಮಾತೆಯವರು ಸುರಮಾ ರಾಯ್‌ಗೆ ಹೇಳಿದರು, ''ಠಾಕೂರರ ಪೂಜೆಗೆ ಗರಿಕೆ ನೀಡು. ನಡುವಿನ ಎಳೆಯನ್ನು ಬಿಸಾಡಿ, ಮೂರು ದಳವನ್ನು ಮಾತ್ರ ಇಟ್ಟುಕೊಳ್ಳಬೇಕು. ಇದೇ ರೀತಿ ಗರಿಕೆಯಿಲ್ಲದೆ ಶಿವಪೂಜೆ ಮಾಡಲಾಗದು.''

ಸಾತು ದೀಕ್ಷೆ ಪಡೆದನಂತರ ಓದು ಮುಂದುವರಿಸುವನೇ ಎಂದು ಕೇಳಿದಾಗ ಶ್ರೀಮಾತೆ ಹೇಳಿದರು: ''ಓದೇ ಓದುತ್ತಾನೆ. ಠಾಕೂರರ ಶಿಷ್ಯಂದಿರೆಲ್ಲ ಮಹಾಮಹಾ ಪಂಡಿತರು. ಮೂರ್ಖರಿಂದ ಯಾವ ಕೆಲಸವೂ ನಡೆಯದು.''

ಶ್ರೀಮಾತೆಯವರು ಜಯರಾಮಬಾಟಿಯಲ್ಲಿ ಇಲ್ಲದಿದ್ದಾಗ ಅಲ್ಲಿಗೆ ಹೋಗಲು ಮನಸ್ಸಾಗುತ್ತಿರಲಿಲ್ಲ. ಒಂದು ಸಲ ಶ್ರೀಮಾತೆಯವರು ಕಲ್ಕತ್ತೆಯಿಂದ ಜಯರಾಮಬಾಟಿಗೆ ಹಿಂದಿರುಗಿದ್ದಾಗ, ಅಲ್ಲಿ ಅವರನ್ನು ಭೇಟಿಮಾಡಲು ಹೋಗಿದ್ದೆ. ಶ್ರೀಮಾತೆ ಹೇಳಿದರು, '' ಓ ನಳಿನ, ಈ ಮಗಳು ಏನು ಹೇಳುತ್ತಿದ್ದಾಳೆ, ಕೇಳು'' ಎಂದರು. ಆ ಹುಡುಗಿ ಹೇಳಿದಳು, ''ಶ್ರೀಮಾತೆಯವರ ಕೋಣೆಯ ಒಳಗೆ ಧಾನ್ಯವನ್ನು ಇಟ್ಟು, ಬಾಗಿಲ ಬಳಿ ಮಲಗಿದ್ದೆ. ರಾತ್ರಿ ತುಂಬ ಹೊತ್ತಾದ ಮೇಲೆ ಶ್ರೀಮಾತೆಯವರು ರೇಷ್ಮೆ ಸೀರೆ ಧರಿಸಿ, ಬಲಗೈಯಲ್ಲಿ ಗಂಗಾಜಲದ ಕಮಂಡಲು ಹಿಡಿದು, ಎಡಗೈಯಲ್ಲಿ ಹೂವುಗಳ ಅಲಂಕಾರವನ್ನು ತೆಗೆದುಕೊಂಡು, ನನಗೆ ಬೈದು ಹೇಳಿದರು, 'ಬಾಗಿಲಿನಿಂದ ದಾರಿ ಬಿಡು. ನಾನು ಒಳಕ್ಕೆ ಹೋಗಿ ಠಾಕೂರರ ಪೂಜೆ ಮಾಡಬೇಕು.' ನಾನು ಬೇಗನೆ ಹಾಸಿಗೆಯನ್ನು ಸುತ್ತಿಕೊಂಡೆ. ಶ್ರೀಮಾತೆಯವರು ಕೋಣೆಯೊಳಕ್ಕೆ ಹೋಗಿ, ಪೂಜೆ ಮಾಡಿ, ಹೊರಗೆ ಬಂದರು.'' ಶ್ರೀಮಾತೆ ಹೇಳಿದರು, ''ಕೇಳಿದೆಯಾ? ನಾನು ಜಯರಾಮಬಾಟಿ ಬಿಟ್ಟು ಹೋಗಿಬಿಟ್ಟೆನೆ?''

ಶ್ರೀಮಾತೆಯವರಿಗಾಗಿ ಧಾನ್ಯವನ್ನು ಕುಟ್ಟುತ್ತ ಗೋಶಾಲೆಯ ಸೊಸೆ ಹೇಳಿದಳು, ''ಅಮ್ಮಾ, ಎಷ್ಟೊಂದು ಜನರು 'ಇಪ್ಪತ್ತೈದು ಪ್ರಹರ' (ಅಂದರೆ ೩ ದಿನಗಳ ನಿರಂತರ ಹರಿನಾಮ ಸಂಕೀರ್ತನೆ) ಮಾಡುತ್ತಿದ್ದಾರೆ! ನಿಮಗೋ– ಎಷ್ಟೊಂದು ಮಂದಿ ಶಿಷ್ಯಂದಿರು, ನೀವು ಕೂಡ 'ಇಪ್ಪತ್ತೈದು ಪ್ರಹರ' ಮಾಡಿಸಿಬಿಡಿ'' ಅದಕ್ಕೆ ಶ್ರೀಮಾತೆ ಹೇಳಿದರು, ''ಗೋಶಾಲೆಯ ಸೊಸೆ, ಇನ್ನು ಮೇಲೆ ನೀನು ಎಷ್ಟೊಂದು ಇಪ್ಪತ್ತೈದು ಪ್ರಹರಗಳನ್ನು ನೋಡುವೆ!''

ಕೇದಾರನಾಥ ದತ್ತನು ಪತ್ನೀವಿಯೋಗವಾದ ನಂತರ ಮತ್ತೆ ಮದುವೆ ಮಾಡಿಕೊಳ್ಳುವನೇ ಎಂದು ಕೇಳಿದಾಗ ಶ್ರೀಮಾತೆ ಹೇಳಿದರು, ''ಹೌದು ಮಗೂ, ಮದುವೆ ಮಾಡಿಕೊಳ್ಳುತ್ತಾನೆ. ಭಕ್ತರ (ಉತ್ತಮ ಮನುಷ್ಯರ) ವಂಶ ವೃದ್ಧಿಯಾದರೆ ಆಗ ಮಾತ್ರವೇ ಸಂಸಾರದ (ಜಗತ್ತಿನ) ಮಂಗಳವುಂಟಾಗುವುದು.''

''ಪತ್ನಿಯೊಂದಿಗೆ ಹೇಗೆ ವರ್ತಿಸಬೇಕು?'' – ಈ ಪ್ರಶ್ನೆಯನ್ನು ಉಮೇಶ ಬಾಬು (ಉಮೇಶಚಂದ್ರ ದತ್ತ) ಕೇಳಿದ. ಅದಕ್ಕೆ ಶ್ರೀಮಾತೆ ಹೀಗೆ ಉತ್ತರಿಸಿದರು: ''ನಿನ್ನ ಸೇವೆ ಮಾಡುವುದಕ್ಕಾಗಿ ಜಗನ್ಮಾತೆಯೇ ನಿನ್ನ ಪತ್ನಿಯರೂಪದಲ್ಲಿ ಬಂದಿದ್ದಾಳೆ ಎಂದು ಭಾವಿಸಬೇಕು.''

ಶ್ರೀಮಾತೆ ಹೇಳುತ್ತಿದ್ದರು: ''ಧನದಿಂದ, ಜನದಿಂದ ಯಾವುದು ಸಾಧ್ಯವಾಗದೋ, ಅದು ಒಂದು ಕ್ಷಣದ ಗುಣದಿಂದ ಸಾಧ್ಯವಾಗುವುದು.''

ಬಾಂಕುರದ ರಾಮತಾರಣನ ಮಂತ್ರದೀಕ್ಷೆಯ ನಂತರ ಶ್ರೀಮಾತೆಯವರು ಆಶು ಮಹಾರಾಜರಿಗೆ (ಸ್ವಾಮಿ ಸತ್ಯಕಾಮಾನಂದರು, ಪೂರ್ವಾಶ್ರಮದಲ್ಲಿ ಆಶುತೋಷ ಮಿತ್ರ. ಸ್ವಾಮಿ ತ್ರಿಗುಣಾತೀತಾನಂದರ ತಮ್ಮನಾಗಿದ್ದ ಅವರು ಶ್ರೀಮಾತೆಯವರ ಸೇವಕರಾಗಿದ್ದರು.) ಹೀಗೆ ಹೇಳಿದರು: ''ಸೃಷ್ಟಿಯನ್ನು ಮುಂದುವರಿಸಬೇಕಾಗಿದ್ದರೆ, ಮತ್ತೆ ಜನರನ್ನು ಇಲ್ಲಿಗೆ ತರಬೇಡ.'' (ಅಂದರೆ, ಶ್ರೀಮಾತೆಯವರಿಂದ ದೀಕ್ಷೆ ಪಡೆದ ಮೇಲೆ ಮುಕ್ತಿ ಎಂದರ್ಥ. ಮುಕ್ತಿ ಪಡೆದರೆ ಮತ್ತೆ ಜನ್ಮವಿಲ್ಲ; ಅದರಿಂದ ಸೃಷ್ಟಿ ಕಾರ್ಯ ನಿಂತುಹೋಗುವುದು.) *(ಸಮಾಪ್ತಿ)*